**ಎಂ ವಿ ಸಿ ನಂ.493/2022**

**ಪಿ.ಡಬ್ಲ್ಯೂ-1**

**ದಿನಾಂಕಃ 28-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ಎಸ್ ಎಸ್ ಜಿ ಮಾನ್ಯ ವಕೀಲರಿಂದ, ಅರ್ಜಿದಾರರ ಪರವಾಗಿ.**

2 ಸ್ಕ್ಯಾನ್ ಪಿಲ್ಮಗಳನ್ನು ಮಾತ್ರ ಹಾಜರು ಮಾಡಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ 8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀಮತಿ ಎ ಎ ಆರ್ ವಕೀಲರಿಂದ, 4 ನೇ ಎದುರುದಾರರ ಪರವಾಗಿ.**

ಅಪಘಾತ ಆದಾಗ ನನಗೆ 34 ವರ್ಷ ವಯಸ್ಸು ಆಗಿತ್ತು. ನಾನು 10 ನೇ ತರಗತಿ ಪಾಸಾಗಿದ್ದೇನೆ. ನನ್ನ ವಯಸ್ಸಿನ ಬಗ್ಗೆ ಆಧಾರ ಕಾರ್ಡ ಕೊಟ್ಟಿದ್ದೇನೆ. ನಾನು ನನ್ನ ವಯಸ್ಸಿನ ಬಗ್ಗೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಲಾಯಿಸುತ್ತಿದ್ದ ಮೊಟರ ಸೈಕಲನ ನೊಂದಣಿ ಸಂಖ್ಯೆ ಕೆಎ-29/ಇಎಫ್-7837 ಇದರ ಮಾಲೀಕರು 3 ನೇ ಎದುರುದಾರರು. ನನ್ನ ಬಳಿ ದ್ವಿಚಕ್ರ ವಾಹನ ಚಾಲನಾ ಪತ್ರ ಇದೆ. ಅದನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ನನ್ನ ಬಳಿ ಇದ್ದ ಚಾಲನಾ ಪತ್ರ ದ್ವಿಚಕ್ರ ವಾಹನ ಚಲಾಯಿಸುವ ಚಾಲನಾ ಪತ್ರ ಆಗಿರುವುದಿಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ನನ್ನ ಬಳಿ ದ್ವಿಚಕ್ರ ವಾಹನದ ಚಾಲನಾ ಪತ್ರ ಇಲ್ಲದ್ದರಿಂದ ನನಗೆ ದ್ವಿಚಕ್ರ ವಾಹನವನ್ನು ಓಡಿಸಲು ಬಾರದೆ ಇದುದರಿಂದ ಸದರ ಅಪಘಾತಕ್ಕೆ ನಾನೇ ಸಂಪೂರ್ಣವಾಗಿ ತಪ್ಪಿತಸ್ಥ ಎಂದರೆ ಸರಿಯಲ್ಲ. ನಾನು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಓನ್ ಡ್ಯಾಮೇಜ ಪಾಲಿಸಿ ಇರುವುದಿಲ್ಲ ಅಂತ ಪೋಲಿಸರು ಸಂಬಂದಪಟ್ಟ ಕಲಂನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ನಾನು ದ್ವಿಚಕ್ರ ವಾಹನ ಚಾಲನಾ ಪತ್ರ ಹೊಂದದೆ ವಾಹನವನ್ನು ಓಡಿಸಿದ್ದರಿಂದ ನಾನು ಈ ಕೇಸಿನಲ್ಲಿ ಕೇಳಿದ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ತಲೆಗೆ ಪೆಟ್ಟಾಗಿ ಶಸ್ತ್ರ ಚಿಕಿತ್ಸೆಯಾಗಿದೆ. ಅಪಘಾತದ 7-8 ದಿನಗಳ ನಂತರ ನನಗೆ ಪಾರ್ಶ್ವವಾಯು ಆಗಿದೆ. ತಲೆಗೆ ಗಾಯ ಆಗಿದ್ದರಿಂದ ರಕ್ತ ಸಂಚಾರ ಆಗದೆ ಇದುದರಿಂದ ಪಾರ್ಶ್ವವಾಯು

ಆಗಿದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸಂಗತಿಗಳು ನಿಜವಾಗಿರುತ್ತವೆ. ನನ್ನ ಅರ್ಜಿಯಲ್ಲಾಗಲಿ ಅಥವಾ ನನ್ನ ಪ್ರಮಾಣ ಪತ್ರದಲ್ಲಾಗಲಿ ನಾನು ಪಾರ್ಶ್ವವಾಯ ಆದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಲೆಯ ಗಾಯಕ್ಕೆ ದಡ್ಡೇನವರ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ, ಸದರಿ ಆಸ್ಪತ್ರೆಯಲ್ಲಿ ಯಾವ ವೈದ್ಯರು ನನಗೆ ಚಿಕಿತ್ಸೆ ಕೊಟ್ಟಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸುಮಾರು 15 ದಿನಗಳವರೆಗೆ ನಾನು ಅಲ್ಲಿ ದಾಖಲಾಗಿದ್ದೆ. ನಾನು ನನ್ನ ಚಿಕಿತ್ಸೆಗೆ ಅಂತ ಸುಮಾರು 10 ಲಕ್ಷಕ್ಕೂ ಮೇಲ್ಪಟ್ಟು ಖರ್ಚು ಮಾಡಿದ್ದೇನೆ. ನ್ಯಾಯಾಲಯಕ್ಕೆ ನಾನು ಅಷ್ಟೊಂದು ಬಿಲ್ಲುಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ತದನಂತರ ನಾನು ಕಾರವಾರ ಹಲಗಾ ಆಸ್ಪತ್ರೆಗೆ ಪಾರ್ಶ್ವವಾಯು ಚಿಕಿತ್ಸೆಗೆ ದಾಖಲಾದೆ. ಅಲ್ಲಿ ಒಳರೋಗಿಯ ವ್ಯವಸ್ಥೆ ಇರುವುದಿಲ್ಲ ಹಾಗೂ ಹೊರರೋಗಿಯಾಗಿ 3 ಸಲ ಚಿಕಿತ್ಸೆ ಪಡೆದಿದ್ದೇನೆ. ಆ ದಾಖಲೆ ನನ್ನ ಬಳಿ ಇರುವುದಿಲ್ಲ. ನಾನು ಯಾವುದೇ ಹಲಗಾ ಆಸ್ಪತ್ರೆಗೆ ಹೋಗಿರುವುದಿಲ್ಲ ಹಾಗೂ ಆ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಕೆಸಿನಲ್ಲಿ ಹಾಜರು ಮಾಡಿದ ಎಲ್ಲ ವೈದ್ಯಕೀಯ ಬಿಲ್ಲು ಮತ್ತು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಈ ಯಾವುದೇ ದಾಖಲೆಗಳು ನನಗೆ ಸಂಬಂದಪಟ್ಟ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಇವತ್ತು ಹಾಜರು ಮಾಡಿದ ನಿಪಿ8 ರ ದಾಖಲೆಗೆ ವರದಿಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ನಿಜ. ಆದ್ದರಿಂದ ನಿಪಿ8 ರ ದಾಖಲೆಯನ್ನು ಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ಸಂಪೂರ್ಣವಾಗಿ ಗುಣಮುಖನಾಗಿದ್ದೇನೆ ಎಂದರೆ ಸರಿಯಲ್ಲ.

ನಾನು ಈ ಮೊದಲು ಕೂಲಿ ಕೆಲಸ ಮಾಡುತ್ತಿದ್ದು ಪ್ರತಿದಿನ 900-1000 ಗಳಿಸುತ್ತಿದ್ದೆ. ನಾನು ದುರುದ್ದೇಶಪೂರ್ವಕವಾಗಿ ಹೆಚ್ಚಿನ ಪರಿಹಾರ ಪಡೆಯಲು ಯದ್ವಾ ತದ್ವಾ ಮೌಲ್ಯಗಳನ್ನು ನನ್ನ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಂದುವರೆದ ಚಿಕಿತ್ಸೆಗೆ 20 ಲಕ್ಷ ರೂ. ಬೇಕಾಗುತ್ತದೆ ಅಂತ ತೋರಿಸಲು ಯಾವುದೇ ವೈದ್ಯಕೀಯ ದಾಖಲೆ ಹಾಜರು ಮಾಡಿಲ್ಲ. ನನಗೆ

**ಎಂ ವಿ ಸಿ ನಂ.493/2022**

**ಪಿ.ಡಬ್ಲ್ಯೂ–1**

ಮುಂದುವರೆದ ಚಿಕಿತ್ಸೆಯ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಯಕ್ತಿಕ ಮತ್ತು ವೃತ್ತಿಪರ ಕೆಲಗಳನ್ನು ಮುಂಚಿನಂತೆ ಮಾಡಬಲ್ಲೆ ಎಂದರೆ ಸರಿಯಲ್ಲ. ನನ್ನ ಮದುವೆಯಾಗಿ 3 ಮಕ್ಕಳಿದ್ದು ಎಲ್ಲರೂ ಶಾಲೆಗೆ ಹೋಗುತ್ತಾರೆ. ನನ್ನ ಕುಟುಂಬ ನಿರ್ವಹಣೆಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದ್ವಿಚಕ್ರ ವಾಹನದ ಚಾಲನ ಪತ್ರ ಇಲ್ಲದ್ದರಿಂದ ಮತ್ತು 3 ನೇ ಎದುರುದಾರನ ವಾಹನದ ಓನ್ ಡ್ಯಾಮೇಜ ಪಾಲಿಸಿ ಇಲ್ಲದ್ದರಿಂದ ನಾನು ಕೇಳಿದ ಪರಿಹಾರಕ್ಕೆ 4 ನೇ ಎದುರುದಾರ ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ನಾನು ಕೇವಲ ಹೆಚ್ಚಿನ ಪರಿಹಾರವನ್ನು ಗಿಟ್ಟಿಸುವ ದುರುದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಮಹೇಶ ಎಸ್ ಪಾಟೀಲ)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್‌ಸಿ, ಬಾಗಲಕೋಟೆ.